# ಯೂಟ್ಯೂಬ್‌ಗೆ ಹೊಸ ಅಪ್‌ಡೇಟ್

ಕೋಟ್ಯಂತರ ಮಂದಿಗೆ ಯೂಟ್ಯೂಬ್ ಒಂದು ಆದಾಯದ ವೇದಿಕೆ. ಈ ವಿಡಿಯೊ ಆನ್‌ಲೈನ್ ಪ್ಲಾಟ್‌ಫಾರ್ಮ್ ಅನ್ನು ಆದಾಯದ ವೇದಿಕೆಯನ್ನಾಗಿಸಿಕೊಂಡವರನ್ನೂ ಸೇರಿದಂತೆ ಎಲ್ಲ ಬಳಕೆದಾರರನ್ನು ತನ್ನ ವೇದಿಕೆಯಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಹೊಸ ಫೀಚರ್ ಪರಿಚಯಿಸಲು ಯೂಟ್ಯೂಬ್ ಸಿದ್ಧತೆ ನಡೆಸಿದೆ.

ಇನ್‌ಸ್ಟಾಗ್ರಾಂನಲ್ಲಿ 'ರೀಲ್ಸ್' ಇದ್ದಂತೆ ಯೂಟ್ಯೂಬ್‌ನಲ್ಲಿ 'ಶಾರ್ಟ್ಸ್'. ಇದನ್ನು ರೀಲ್ಸ್‌ನಂತೆ ಬಳಕೆಸ್ನೇಹಿಯಾಗಿಸಲು ಯೂಟ್ಯೂಬ್ ಸದ್ಯ ಮುಂದಾಗಿದ್ದು, 'ಮ್ಯೂಸಿಕ್ ರಿಮಿಕ್ಸ್' ಅನ್ನುವ ಹೊಸ ಫೀಚರ್ ಪರಿಚಯಿಸಲು ಸಜ್ಜಾಗುತ್ತಿದೆ. ಈ ಫೀಚರ್‌ನ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುತ್ತಿದ್ದು, ತ್ವರಿತವಾಗಿ ಯೂಟ್ಯೂಬ್‌ನಲ್ಲಿ ಕಾಣಿಸಿಕೊಳ್ಳಲಿದೆ.

ಶಾರ್ಟ್ ಕ್ರಿಯೇಟರ್ಸ್‌ಗಾಗಿ ಯೂಟ್ಯೂಬ್ ಮ್ಯೂಸಿಕ್ ರೆಡಿ ಮಾಡುವ ಪ್ರಕ್ರಿಯೆಗೆ ಹೊಸ ರೂಪ ನೀಡಲು ಈ ಫೀಚರ್ ಸಿದ್ಧವಾಗುತ್ತಿದೆ. ಹೊಸ ಫೀಚರ್ ಅನ್ನು 'ಅಡ್ವಾನ್ಸ್ಡ್ ಎಐ' ತಂತ್ರಜ್ಞಾನಕ್ಕೆ ಇಂಟಿಗ್ರೇಟ್ ಮಾಡಿ ಅಭಿವೃದ್ಧಿ ಮಾಡಲಾಗುತ್ತಿದೆ. ಇದು ಯೂಟ್ಯೂಬ್ ಬಳಕೆದಾರರಿಗೆ ಎಐ (ಕೃತಕ ಬುದ್ಧಿಮತ್ತೆ) ಟೂಲ್ ಕಲ್ಪಿಸಲಿದ್ದು, ಅದರ ಮೂಲಕ ಶಾರ್ಟ್ಸ್ ರಚನೆ ಇನ್ನಷ್ಟು ಸಲೀಸಾಗುತ್ತದೆ. ಅಲ್ಲದೆ ಎಐ ಜನರೇಟೆಡ್ 30 ಸೆಕೆಂಡ್ ಸೌಂಡ್ ಟ್ರ್ಯಾಕ್ ರಚಿಸಲು ನೆರವಾಗಲಿದೆ.

ಇನ್ನು ಈ ಫೀಚರ್‌ನ ಮೂಲಕ ಕ್ರಿಯೇಟರ್ಸ್ ತಮಗೆ ಬೇಕಾದ ಹಾಡನ್ನು ಆಯ್ಕೆ ಮಾಡಿಕೊಳ್ಳಬಹುದು. ನಂತರ ಆ ಹಾಡಿಗೆ ತಕ್ಕಂತೆ ರೀಮಿಕ್ಸ್ ಮಾಡಲು ಅಥವಾ ಬದಲಾಯಿಸಲು ಎಐ ನೆರವು ಪಡೆದುಕೊಂಡು ಇನ್ನಷ್ಟು ಪರಿಣಾಮಕಾರಿಯಾಗಿ ವಿಡಿಯೊ ರಚಿಸಬಹುದು. ಅದಕ್ಕೂ ಮುನ್ನ ಆ ಹಾಡನ್ನು ರೀಮಿಕ್ಸ್ ಮಾಡಲು ಟೆಕ್ಸ್ಟ್ ಆಧರಿತ ಪ್ರಾಂಪ್ಟ್ ಬಳಸಬೇಕಾಗುತ್ತದೆ. ಆಗ ಎಐ, ಈ ಟೆಕ್ಸ್ಟ್ ಆಧರಿತ ಪ್ರಾಂಪ್ಟ್ ಬಳಸಿಕೊಂಡು ಹಾಡನ್ನು ರೀಮಿಕ್ಸ್ ಮಾಡುತ್ತದೆ. ಅಷ್ಟೇ ಅಲ್ಲ, ಈ ಹೊಸ ಯೂಟ್ಯೂಬ್ ಫೀಚರ್‌ನಿಂದ ಬಳಕೆದಾರರು ತಮ್ಮ ಸ್ವಂತ ಆಲೋಚನೆಗಳನ್ನು ಹಾಡಾಗಿ ಸುಲಭವಾಗಿ ಸಂಯೋಜಿಸಬಹುದು. ಈ ಹಾಡಿನ ಸಹಾಯದಿಂದ ಶಾರ್ಟ್ ಕ್ರಿಯೇಟರ್ಸ್ ತಮ್ಮ ವಿಡಿಯೊಗಳಿಗೆ ಬ್ಯಾಕ್‌ಗ್ರೌಂಡ್ ಟ್ರ್ಯಾಕ್ ಆಗಿ ಬಳಸಿಕೊಳ್ಳಬಹುದು.

**ತನ್ನ ಬಳಕೆದಾರರನ್ನು ಮತ್ತಷ್ಟು ಸಕ್ರಿಯಗೊಳಿಸಲು ಯೂಟ್ಯೂಬ್, ಹೊಸ ಅಪ್‌ಡೇಟ್‌ಗಳನ್ನು ಅಭಿವೃದ್ಧಿಗೊಳಿಸುತ್ತಿದೆ.**

**■ ಶಶಿಕುಮಾರ್ ಸಿ.**

### ಪಾಡ್‌ಕಾಸ್ಟ್‌ಗೂ ಜಾಗ

ಮ್ಯೂಸಿಕ್ ರೀಮಿಕ್ಸ್ ಜೊತೆಗೆ ಪಾಡ್‌ಕಾಸ್ಟ್ ಫೀಚರ್ ಸಹ ಸಿದ್ಧವಾಗುತ್ತಿದೆ. ಇಷ್ಟು ದಿನ ಯೂಟ್ಯೂಬ್‌ನಲ್ಲಿ ಕ್ರಿಯೇಟ್ ಬಟನ್ ಅನ್ನು ಬಳಕೆದಾರರು ವಿಡಿಯೊ ಅಪ್‌ಲೋಡ್ ಮಾಡಲು, ಟೆಕ್ಸ್ಟ್ ಪೋಸ್ಟ್ ಮಾಡಲು ಮತ್ತು ಲೈವ್ ಸ್ಟ್ರೀಮ್ ಪ್ರಾರಂಭಿಸಲು ಬಳಸುತ್ತಿದ್ದರು. ಈ ಬಟನ್ ಅನ್ನು ಪಾಡ್‌ಕಾಸ್ಟ್ ಅಪ್‌ಲೋಡ್ ಮಾಡಲೂ ಬಳಸಬಹುದಾಗಿದೆ. ಯೂಟ್ಯೂಬ್‌ನ ಬೀಟಾ ಪರೀಕ್ಷೆಯಲ್ಲಿ ಪಾಲ್ಗೊಂಡಿರುವ ಬಳಕೆದಾರರು ಈ ಬಗ್ಗೆ ಸೋಷಿಯಲ್ ಮೀಡಿಯಾಗಳಲ್ಲಿ ಮಾಹಿತಿ ಹಂಚಿಕೊಂಡಿದ್ದು, ಈ ಬಗ್ಗೆ ಯೂಟ್ಯೂಬ್ ಸಹ ಪ್ರಸ್ತಾಪಿಸಿದೆ.

ಯೂಟ್ಯೂಬ್‌ನಲ್ಲಿ ಈಗಾಗಲೇ ಹಲವಾರು ವಿಭಾಗಗಳಿದ್ದು, ಆ ಪಟ್ಟಿಗೆ ಪಾಡ್‌ಕಾಸ್ಟ್ ಪರಿಚಯಿಸಲಾಗುತ್ತಿದೆ. ಇದನ್ನು ಬಳಕೆದಾರರು ಕಂಟೆಂಟ್ ಮೆನುವಿನಲ್ಲಿ ಪಾಡ್‌ಕಾಸ್ಟ್ ಟ್ಯಾಬ್ ಆಯ್ಕೆ ಕ್ಲಿಕ್ಕಿಸಿ, ಬಳಸಬಹುದು. ಅಂತೆಯೇ ಮೂರು ಚುಕ್ಕೆಗಳ ಮೆನುವಿನಲ್ಲಿ ಹೊಸ ಆಯ್ಕೆಯನ್ನು ಬಳಕೆ ಮಾಡಿಕೊಂಡು ಅಸ್ತಿತ್ವದಲ್ಲಿರುವ ಪ್ಲೇ ಪಟ್ಟಿಗಳನ್ನು ಪಾಡ್‌ಕಾಸ್ಟ್‌ಗಳಾಗಿ ಹೊಂದಿಸಲೂಬಹುದು. ■

## ವಾಟ್ಸ್‌ಆ್ಯಪ್ ಪೇ ಬಂಧಮುಕ್ತ

ಜನಪ್ರಿಯ ಮೆಸೇಜಿಂಗ್ ಆ್ಯಪ್ ಆದ ವಾಟ್ಸ್‌ಆ್ಯಪ್, 2020ರ ಮಾರ್ಚ್‌ನಲ್ಲಿ ಹಲವು ನಿಬಂಧನೆಗಳೊಂದಿಗೆ ಬಿಡುಗಡೆ ಮಾಡಿದ್ದ 'ವಾಟ್ಸ್‌ಆ್ಯಪ್ ಪೇ' ಈಗ ಬಂಧಮುಕ್ತವಾಗಿದೆ. 'ವಾಟ್ಸ್‌ಆ್ಯಪ್ ಪೇ' ಬಿಡುಗಡೆ ಸಮಯದಲ್ಲಿ ಸುರಕ್ಷತಾ ದೃಷ್ಟಿಯಿಂದ ದೇಶದ 10 ಕೋಟಿ ಮಂದಿಗಷ್ಟೇ ವಾಟ್ಸ್‌ಆ್ಯಪ್ ಪೇ ಬಳಸಲು ಅವಕಾಶ ಕಲ್ಪಿಸಿತ್ತು. ಇದು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ (ಎನ್‌ಪಿಸಿಐ) ವಿಧಿಸಿದ್ದ ನಿಬಂಧನೆ ಆಗಿತ್ತು. ಇದನ್ನು ಈಚೆಗೆ ಎನ್‌ಪಿಸಿಐ ತೆರವುಗೊಳಿಸಿದೆ.

'ವಾಟ್ಸ್‌ಆ್ಯಪ್ ಪೇ' ಬಿಡುಗಡೆಗೆ ವಿಧಿಸಿದ್ದ ಎಲ್ಲ ನಿಯಮಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿದ ಕಾರಣಕ್ಕಾಗಿ ಮಿತಿಯನ್ನು ತೆರವು ಮಾಡಲಾಗಿದೆ. ಇದರಿಂದ ಸದ್ಯ ಭಾರತದಲ್ಲಿರುವ ಸುಮಾರು 53 ಕೋಟಿ ವಾಟ್ಸ್‌ಆ್ಯಪ್ ಬಳಕೆದಾರರು ಇನ್ನು ಮುಂದೆ ವಾಟ್ಸ್‌ಆ್ಯಪ್ ಪೇ ಬಳಸಬಹುದಾಗಿದೆ. ಇದು ವಾಟ್ಸ್‌ಆ್ಯಪ್ ಪೇನ ವಹಿವಾಟಿನ ದಿಢೀರ್ ಏರಿಕೆಗೂ ಕಾರಣವಾಗಲಿದೆ. ಜೊತೆಗೆ ಪ್ರಮುಖ ಆನ್‌ಲೈನ್ ಪೇಮೆಂಟ್ ಆ್ಯಪ್‌ಗಳೆಂದು ಗುರುತಿಸಿಕೊಂಡಿರುವ ಫೋನ್ ಪೇ, ಗೂಗಲ್ ಪೇ, ಪೇಟಿಎಂ ಆ್ಯಪ್‌ಗಳಿಗೆ ಪ್ರಬಲ ಪ್ರತಿಸ್ಪರ್ಧೆ ಎದುರಾಗಲಿದೆ.

## ಯುಪಿಐ ವಹಿವಾಟು ಮಿತಿ ಹೆಚ್ಚಳ

ಫೀಚರ್ ಫೋನ್ ಬಳಕೆದಾರರ ಅನುಕೂಲಕ್ಕೆಂದು ಪರಿಚಯಿಸಲಾಗಿರುವ ಯುಪಿಐ ಭಾಗವೇ ಆದ 'ಯುಪಿಐ123ಪೇ' ಸೇವೆಯ ವಹಿವಾಟಿನ ಮಿತಿಯನ್ನು ಈಚೆಗೆ ಹತ್ತು ಸಾವಿರ ರೂಪಾಯಿಗೆ ಏರಿಕೆ ಮಾಡಲಾಗಿದೆ.

ಆರ್‌ಬಿಐ ಈ ಬಗ್ಗೆ ಹೊಸ ಆದೇಶ ಹೊರಡಿಸಿದ್ದು, ಈ ಹಿಂದೆ ಇದ್ದ ಐದು ಸಾವಿರ ರೂಪಾಯಿ ಗರಿಷ್ಠ ಮಿತಿಯಿಂದ ಹತ್ತು ಸಾವಿರ ರೂಪಾಯಿಗೆ 'ಯುಪಿಐ123ಪೇ' ಬಡ್ತಿ ಪಡೆದಿದೆ. ಈ ಸೇವೆಯನ್ನು ಫೀಚರ್ ಫೋನ್ ಬಳಕೆದಾರರು (ಬೇಸಿಕ್ ಸೆಲ್‌ಫೋನ್‌ಗಳನ್ನು ಹೊಂದಿರುವವರು) ಮಾತ್ರ ಬಳಸಲು ಸಾಧ್ಯವಿದೆ. ಯುಪಿಐ123ಪೇ ಪಾವತಿಗಳನ್ನು ಮಾಡುವಲ್ಲಿ ಬಳಕೆದಾರರ ವಹಿವಾಟಿನ ಮೊತ್ತ ಹೆಚ್ಚಿಸಿ ಅವರಿಗೆ ಅನುಕೂಲಕರ ವಾತಾವರಣ ಸೃಷ್ಟಿಸಲು ಆರ್‌ಬಿಐ ಮುಂದಾಗಿದೆ. ಪ್ರಸ್ತುತ ಫೋನ್‌ಪೇ, ಪೇಟಿಎಂ, ಗೂಗಲ್‌ಪೇಯಂತಹ ಆನ್‌ಲೈನ್ ಪೇಮೆಂಟ್ ಆ್ಯಪ್‌ಗಳಲ್ಲಿ ಇದ್ದ ದಿನದ ವಹಿವಾಟಿನ ಮಿತಿಯಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ.